ಮೈಸೂರು ಜಿಲ್ಲೆಯ ಹೆಗ್ಗಡದೇವನ ಕೋಟೆ ಮೂಲಕ ಪ್ರತಿದಿನ ಸಮಾರು ೫ ಲಾರಿ ಹುಲ್ಲಿ ಹಾಗೂ ೨೦ ಲಾರಿ ದನದ ಗೊಬ್ಬರ ಕಳ್ಳಸಾಗಾಣಿಕೆಯಾಗುತ್ತಿದೆ. ಈ ವಿಷಯವನ್ನು ಜಿಲ್ಲಾಭಿವೃದ್ಧಿ ಸಮಿತಿ ಸಭೆಯಲ್ಲಿ ಮಂತ್ರಿಗಳು ಮತ್ತು ಅಧಿಕಾರಿಗಳ ಗಮನಕ್ಕೆ ತಂದಾಗ ಹುಲ್ಲು ಸಾಗಾಣಿಕೆಯಾಗುತ್ತಿರುವುದನ್ನು ತಡೆಗಟ್ಟಲು ಸೂಚನೆ ನೀಡಲಾಗಿತ್ತು. ಆದರೂ ಪ್ರತಿದಿನ ಹುಲ್ಲು ಸಾಗಾಣಿಕೆಯಾಗುತ್ತಿರುವುದು ನಿಂತಿಲ್ಲ. ಈಗ್ಗೆ ಒಂದು ವಾರದ ಹಿಂದೆ ಸಂಮಾರು ೫ ಲಾರಿ ಲೋಡು ಹುಲ್ಲು ಸಾಗಾಣಿಕೆಯಾಗುವ ಸಂದರ್ಭದಲ್ಲಿ ಹೆಗ್ಗಡದೇವನಕೋಟೆಯ ಹ್ಯಾಂಡ್‌ಪೋಸ್ಟ್‌ನಲ್ಲಿ (ಫಾರೆಸ್ಟ್ ಚೆಕ್‌ಪೋಸ್ಟ್ ಹತ್ತಿರ) ರಾತ್ರಿ ಸುಮಾರು ೧೧ ಗಂಟೆ ಸಮಯದಲ್ಲಿ ಸಾರ್ವಜನಿಕರೇ ಹುಲ್ಲಿನ ಲಾರಿಯನ್ನು ತಡೆದು ತಹಸೀಲ್ದಾರರಿಗೆ ಫೋನ್ ಮಾಡಿ ವಶಕ್ಕೆ ತೆಗೆದುಕೊಳ್ಳಲು ಹೇಳಿದಾಗ ನುಣುಚಿಕೊಳ್ಳುವ ಉತ್ತರ ಬಂದಿದೆ. ಪೋಲೀಸ್ ಠಾಣೆಗೆ ಫೋನ್ ಮಾಡಿದಾಗ ಅಲ್ಲಿನ ಸೆಂಟ್ರಿ ನಾನೊಬ್ಬನೇ ಇದ್ದೇನೆ, ಬರ ಲಾಗುವುದಿಲ್ಲ ಎಂಬ ಉತ್ತರ ಬಂದಿದೆ. ನಂತರ ಹುಲ್ಲಿನ ಲಾರಿ ಯಾವ ಅಡೆತಡೆ ಇಲ್ಲದೆ ಕೇರಳ ರಾಜ್ಯಕ್ಕೆ ಹೋಗಿದೆ.

ಈಗ್ಗೆ ಸುಮಾರು ೪ ತಿಂಗಳ ಹಿಂದೆ ನಾನೇ ಖುದ್ದಾಗಿ ಲಾರಿಯನ್ನು ತಡೆದು ನಿಲ್ಲಿಸಿ ಪೋಲೀಸಿನವರನ್ನು ಕೇಳಿದಾಗ ರಾಜ್ಯದ ಗಡಿಯಿಂದ ೫ ಕಿ.ಮೀ. ಒಳಗಿದ್ದರೆ ಮಾತ್ರ ಹಿಡಿಯಲು ಸಾಧ್ಯವಿದೆ, ಇಲ್ಲದಿದ್ದರೆ ಸಾಧ್ಯವಿಲ್ಲ ಎಂಬ ಉತ್ತರ ಬಂದಿದೆ ನಂತರ ಮೇಲ್ಮಟ್ಟದ ಅಧಿಕಾರಿಗಳನ್ನು ವಿಚಾರಿಸಿದಾಗಲೂ ಇದೇ ಉತ್ತರ ಬಂದಿದೆ. ಅಲ್ಲದೆ ರೈತರಿಗೆ ಅವಶ್ಯಕವಾಗಿ ಬೇಕಾಗಿರುವ ದನದ ಗೊಬ್ಬರವನ್ನು ರಾಜ್ಯದಲ್ಲಿ ಕಡಿಮೆ ಬೆಲೆಗೆ ಕೊಂಡು ಅದನ್ನು ಕೇರಳ ರಾಜ್ಯದಲ್ಲಿ ಹೆಚ್ಚಿನ ಬೆಲೆಗೆ ಮಾರಾಟ ಮಾಡಲಾಗುತ್ತಿದೆ. ಈ ಗೊಬ್ಬರವೂ ಸಹ ಪ್ರತಿದಿನ ಸುಮಾರು ೨೦ ಲಾರಿ ಲೋಡ್ ಯಾವ ಅಡೆತಡೆ ಇಲ್ಲದೆ ಕೇರಳಕ್ಕೆ ಕಳ್ಳ ಸಾಗಾಣಿಕೆಯಾಗುತ್ತಿದೆ. ಮತ್ತು ಅವಶ್ಯಕ ವಸ್ತುಗಳು, ಬೆಲೆ ಜಾಳುವ ಇನ್ನಿತರ ವಸ್ತುಗಳು ಸಾಗಾಣಿಕೆಯಾಗುತ್ತಿದ್ದರೂ ತಡೆಗಟ್ಟುವಲ್ಲಿ ಅಧಿಕಾರಿಗಳು ಮತ್ತು ಸರಕಾರ ಅದಕ್ಷವಾಗಿರುವುದು ಶೋಚನೀಯ. ಆದ್ದರಿಂದ ಆಗತ್ಯ ವಸ್ತುಗಳ ನಿಯಂತ್ರಣ ಕಾಯಿದೆಯಡಿಯಲ್ಲಿ ಈ ಸಾಗಾಣಿಕೆಯನ್ನು ತಡೆಗಟ್ಟಬೇಕೆಂದು ಸರಕಾರವನ್ನು ಆಗ್ರಹಪೂರ್ವಕವಾಗಿ ಒತ್ತಾಯಿಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೆ, ಹುಲ್ಲಾಗಲಿ, ಮೇವು ರಾಜ್ಯದಿಂದ ಹೊರಗೆ ಒಯ್ಯುವುದಕ್ಕೆ ನಿಷೇಧಾಜ್ಞೆ ಇದೆ. ಆದರೂ ಕೂಡ ಈ ರೀತಿ ನಡೆದಿದೆ ಎಂದು ಮಾನ್ಯ ಶಾಸಕರು ನಮ್ಮ ಗಮನಕ್ಕೆ ತಂದಿದ್ದಾರೆ, ಅಧಿಕಾರಿಗಳು ಆ ರೀತಿ ನಡೆದುಕೊಂಡದ್ದು ತಪ್ಪು. ಕೂಡಲೇ ಅವರ ಮೇಲೆ ಸೂಕ್ತಕ್ರಮ ಕೈಗೊಳ್ಳುತ್ತೇವೆ. ಮುಂದೆ ಬೇರೆ ರಾಜ್ಯಕ್ಕೆ ಹೋಗದಂತೆ ವ್ಯವಸ್ಥೆ ಮಾಡುವುದಕ್ಕೆ ತಿಳಿಸುತ್ತೇವೆ. ಗೊಬ್ಬರದ ವಿಚಾರ ಹೇಳಿದ್ದಾರೆ. ನನಗೆ ತಿಳಿದಮಟ್ಟಿಗೆ ಗೊಬ್ಬರದ ಬಗ್ಗೆ ಸಾಗಾಣಿಕೆಗೆ ನಿರ್ಬಂಧ ಇಲ್ಲ. ಆದನ್ನು ಪರಿಶೀಲನೆ ಮಾಡುತ್ತೇನೆ.

Leave of Absence

ಅಧ್ಯಕ್ಷರು.—ವಿಧಾನಸಭಾ ಸದಸ್ಯರಾದ ಶ್ರೀ ಮಹಮದ್ ಲೈಕುದ್ದೀನ್‌ರವರು ತಮ್ಮ ಗೃಹ ಕೃತ್ಯದ ಸಲುವಾಗಿ ದಿನಾಂಕ ೨೮-೨-೧೯೮೬ ರಿಂದ ೧೪-೩-೧೯೮೬ರವರೆಗೆ ವಿಧಾನಸಭೆಯ ಉಪವೇಶನಗಳಿಗೆ ಗೈರುಹಾಜರಾಗಲು ಅನುಮತಿಯನ್ನು ಕೋರಿ ಪತ್ರ ಬರೆದಿರುತ್ತಾರೆ. ಶ್ರೀಮಹಮದ್ ಲೈಕುದ್ದೀನ್‌ರವರಿಗೆ ಮೇಲೆ ಸೂಚಿಸಿದ ಅವಧಿಯಲ್ಲಿ ವಿಧಾನಸಭೆಯ ಉಪವೇಶನಗಳಿಗೆ ಗೈರುಹಾಜರಾಗುವುದಕ್ಕೆ ಅನುಮತಿ ಕೊಡಬೇಕೆಂದು ಸದನವು ಅಪೇಕ್ಷಿಸುತ್ತದೆಯೆ ?

(ಯಾವ ಸದಸ್ಯರೂ ವಿರೋಧ ವ್ಯಕ್ತಪಡಿಸಲಿಲ್ಲ)

ಅಧ್ಯಕ್ಷರು.—ಗೈರು ಹಾಜರಾಗಲು ಶ್ರೀ ಮಹಮದ್ ಲೈಕುದ್ದೀನ್‌ರವರಿಗೆ ಅನುಮತಿ ನೀಡಲಾಗಿದೆ

ವಿಧಾನಸಭಾ ಸದಸ್ಯರಾದ ಶ್ರೀಜ್ಞಾನದೇವ ದೊಡ್ಡ ಮೇಟಿಯಂವರು ದಿನಾಂಕ ೨೧-೨-೧೯೮೬ ರಿಂದ ೩-೩-೧೯೮೬ರವರೆಗೆ ವಿಧಾನಸಭಾ ಉಪವೇಶನಗಳಿಗೆ ಗೈರುಹಾಜರಾಗಲಂ ಅನುಮತಿಯನ್ನು ಕೋರಿ ಪತ್ರ ಬರೆದಿರುತ್ತಾರೆ. ಶ್ರೀ ಜ್ಞಾನದೇವ ದೊಡ್ಡಮೇಟಿಯಂವರಿಗೆ ಮೇಲೆ ಸೂಚಿಸಿದ ಅವಧಿಯಲ್ಲಿ ವಿಧಾನಸಭೆಯ ಉಪವೇಶನಗಳಿಗೆ ಗೈರುಹಾಜರಾಗುವುದಕ್ಕೆ ಅನುಮತಿ ಕೊಡಬೇಕೆಂದು ಸದನವು ಅಪೇಕ್ಷಿಸುತ್ತದೆಯೆ ?

(ಯಾವ ಸದಸ್ಯರೂ ವಿರೋಧ ವ್ಯಕ್ತಪಡಿಸಲಿಲ್ಲ)

ಅಧ್ಯಕ್ಷರು.—ಗೈರುಹಾಜರಾಗಲು ಶ್ರೀ ಜ್ಞಾನದೇವ ದೊಡ್ಡಮೇಟಿಯವರಿಗೆ ಅನುಮತಿ ನೀಡಲಾಗಿದೆ.

೫. ವಿತ್ತೀಯ ಕಾರ್ಯಕಲಾಪಗಳು

೧೯೮೬-೮೭ನೇ ಸಾಲಿನ ಬೇಡಿಕೆಗಳ ಮಂಡನೆ ಮತ್ತು ಚರ್ಚೆ

ಅಭಿಯಾಚನೆ ಕ್ರಮಾಂಕ ೨೫ ಪೋಲೀಸ್ ಮತ್ತು ಅಗ್ನಿಶಾಮಕ ಸೇವೆ

ಶ್ರೀ ಬಿ ರಾಚಯ್ಯ —ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಪೋಲೀಸ್ ಮತ್ತು ಅಗ್ನಿಶಾಮಕ ಸೇವೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೯೧,೫೯,೬೯,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ

ಅಭಿಯಾಚನೆ ಕ್ರಮಾಂಕ ೨೩ ರಾಜ್ಯದ ಅಬಕಾರಿ

ಶ್ರೀ ರಮೇಶ್ ಸಿ. ಜಿಗಜಿಣಗಿ.—ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರಾಜ್ಯದ ಅಬಕಾರಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೩,೫೭,೫೦,೦೦೦ ರೂಪಾಯಿಗಳಿಗಿಂತ ವಿೂರದ ಮೊತ್ತವನ್ನು ಮಂಜೂರು ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ ೧೯ ಸಣ್ಣ ಉಳಿತಾಯಗಳು

ಶ್ರೀ ವೀರಣ್ಣ.—ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಣ್ಣ ಉಳಿತಾಯಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೧,೬೮,೦೦,೦೦೦ ರೂಪಾಯಿಗಳಿಗಿಂತ ವಿಾರದ ಮೊತ್ತವನ್ನು ಮಂಜೂರು ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ ೨೬ ಬಂಧಿಖಾನೆ ಇತ್ಯಾದಿಗಳು

ಶ್ರೀ ವೀರಣ್ಣ —ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಜೈಲುಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೫,೪೪,೭೫,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೫,೦೦,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ.

ಪ್ರಸ್ತಾವಗಳನ್ನು ಮಂಡಿಸಲಾಯಿತು.

ಅಧ್ಯಕ್ಷರು.—ಈ ಬೇಡಿಕೆಗಳನ್ನು ಸಭೆಯ ಮುಂದೆ ಇಡಲಾಗಿದೆ. ಈಗ ಈ ಬೇಡಿಕೆಗಳು ಸಭೆಯ ಮುಂದೆ ಚರ್ಚೆಗೆ ಇವೆ. ಮಾನ್ಯ ಧರ್ಮಸಿಂಗ್ ಅವರು ಚರ್ಚೆಯನ್ನು ಪ್ರಾರಂಭಿಸಲಿ.

† ಶ್ರೀ ಧರ್ಮಸಿಂಗ್ (ಜೇವರ್ಗಿ).—ಮಾನ್ಯ ಅಧ್ಯಕ್ಷರೇ, ಈ ಸಭೆಯ ಮುಂದೆ ಮಂಡಿಸಿರತಕ್ಕ ಬೇಡಿಕೆ ಸಂಖ್ಯೆ ೨೫,೨೩, ೧೯ ಹಾಗೂ ೨೬ಗಳಿಗೆ ನನ್ನ ವಿರೋಧವನ್ನು ವ್ಯಕ್ತಪಡಿಸುತ್ತಾ ಈ ದಿವಸ ಕೆಲವು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮೊಟ್ಟಮೊದಲನೆಯದಾಗಿ ಮಾನ್ಯ ಗೃಹ ಸಚಿವರು ಮಂಡಿಸಿರತಕ್ಕ ಬೇಡಿಕೆ ಏನು ಇದೆ ಅದನ್ನು ಬಹಳ ತೀವ್ರತರವಾಗಿ ನಾನು ವಿರೋಧಿಸುತ್ತೇನೆ. ಅಧ್ಯಕ್ಷರೇ, ಈಗಾಗಲೇ ಹೇಳಬೇಕೆಂದರೆ, ನಿನ್ನೆಯ ದಿವಸ ಈ ಪೋಲೀಸ್ ಇಲಾಖೆಗೆ ಸಂಬಂಧಪಟ್ಟ ವಾರ್ಷಿಕ ವರದಿ ನಮಗೆ ತಲುಪಿದೆ.

---

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.